ಕರ್ನಾಟಕ ಅರಣ್ಯ ಇಲಾಖೆ

ಕ್ರ.ಸಂ: ಬಿ2/ಜಿಎಫ್ಎಲ್/ಎಂಎಲ್‌ಪಿ/18.458/ವಿವ-111/2013-14.

ಉಪ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಚೇರಿ,
ಬಾಗಲಕೋಟೆ ವಿಭಾಗ, ಬಾಗಲಕೋಟೆ.
ದಿನಾಂಕ:09/01/2023

ಇವರಿಗೆ,
ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಬೆಳಗಾವಿ ವೃತ್ತ, ಬೆಳಗಾವಿ.

ಮಾನ್ಯರೆ,

**ವಿಷಯ:** ***Diversion of 18.458 ha. of forest land in Sy. No. 6,7,8,205, 210 & 219 of Kallahalli, Sy.No. 152 of Siddapur, Sy.No. 13 of Ramateertha and Sy No. 9, 25, 36 & 42 of Jamkhandi village, Jamkhandi taluk, Bagalkot District for construction of new 110 KV D/C lin in the existing 110 KV Mahalingapur to Jamkhandi S/C line corridor for distance of 23.897 Km in favour of Executive Engineer (Electrical), Major Works Division, Karnataka Power Trasmission Corporation Limited (KPTCL), Bagalkot. (Proposal No. FP/KA/TRANS/16981/2015.)***

ಉಲ್ಲೇಖ:
1. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುವರ ಪತ್ರ ಸಂಖ್ಯೆ: ಎ 5(2). ಜಿಎಫ್‌ಎಲ್.ಸಿಆರ್-23/2015-16 ದಿನಾಂಕ: 12-0 3-2021.
2. ತಮ್ಮ ಕಚೇರಿ ಪತ್ರ ಸಂಖ್ಯೆ: ಎ 7/ಎಲ್‌ಎನ್‌ಡಿ/ಎಫ್‌ಸಿಪಿ/ಟಿಎಲ್/ಬಿಜಿಕೆ/ಸಿಆರ್-14/14-15/20-21 ದಿನಾಂಕ: 1/04/2021.
3. ಕಾರ್ಯ ನಿರ್ವಾಹಕ ಇಂಜಿನಿಯರರು (ವಿ) ಬೃಹತ್ ಕಾಮಗಾರಿ ವಿಭಾಗ, ಬಾಗಲ ಕೋಟರವರ ಪತ್ರ ಸಂಖ್ಯೆ: 614/ ಬಾಕೋ/ ಕಾನಿಇಂ(ವಿ)/ ಬೃಕಾವಿ/ ಸಕಾನಿಇಂ(ಕ)/ಸಇಂ/21-22/2455-57 ದಿನಾಂಕ: 08-10-021.
4. ಕಾರ್ಯ ನಿರ್ವಾಹಕ ಇಂಜಿನಿಯರರು (ವಿ) ಬೃಹತ್ ಕಾಮಗಾರಿ ವಿಭಾಗ, ಬಾಗಲ ಕೋಟರವರ ಪತ್ರ ಸಂಖ್ಯೆ: 610/ ಬಾಕೋ/ ಕಾನಿಇಂ(ವಿ)/ ಬೃಕಾವಿ/ ಸಕಾನಿಇಂ(ಕ)/ಸಇಂ/21-22/4439 ದಿನಾಂಕ: 23-12-2021.
5. ತಮ್ಮ ಕಚೇರಿಯಿಂದ ಆನ್‌ಲೈನ್‌ನಲ್ಲಿ ಹಿಂದಿರುಗಿಸಿದ ದಿನಾಂಕ: 6-11-2021.
6. ಈ ಕಚೇರಿಯಿಂದ ಪ್ರಸ್ತಾವನೆಯನ್ನು ಆನ್‌ಲೈನ್‌ನಲ್ಲಿ ಉಪಯೋಗಿ ಸಂಸ್ಥೆಯವರಿಗೆ ಹಿಂದಿರುಗಿಸಿದ ದಿನಾಂಕ: 16-11-2021 & 27-12-2021.
7. ಕಾರ್ಯ ನಿರ್ವಾಹಕ ಇಂಜಿನಿಯರರು (ವಿ) ಬೃಹತ್ ಕಾಮಗಾರಿ ವಿಭಾಗ, ಬಾಗಲ ಕೋಟರವರು ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕ ಹಿಂದಿರುಗಿಸಿದ ದಿನಾಂಕ: 23-12-2021 & 27-12-2021.
8. ಈ ಕಚೇರಿ ಪತ್ರ ಸಮ ಸಂಖ್ಯೆ 1664 ದಿನಾಂಕ: 30/12/2021.

9. ಭಾರತ ಸರ್ಕಾರದ ಪತ್ರ ಸಂಖ್ಯೆ: FNo.4-KRC 11982019-BAN/179 ದಿನಾಂಕ: 5-05-2022.
10. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರು ರವರ ಪತ್ರ ಸಂಖ್ಯೆ: ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಎ 5(2)/ಜಿಎಫ್‌ಎಲ್/ಸಿಆರ್-23/2015-16 ದಿನಾಂಕ: 25-10-2022.
11. ಈ ಕಚೇರಿ ಪತ್ರ ಸಂಖ್ಯೆ: ಕೆಎಫ್‌ಡಿ/ ಬಿಜಿಕೆಡಿ /೦ಬಿ2(ಎಫ್‌ಸಿ)/16/2022-ಡಿಸಿಎಫ್/ಬಿಜಿಎಲ್‌ಟಿ ದಿನಾಂಕ: 28-11-2022.
12. ಕಾರ್ಯ ನಿರ್ವಾಹಕ ಅಧಿಕಾರಿಗಳು, (ವಿ), ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ ಬಾಗಲಕೋಟೆರವರ ಪತ್ರ ಸಂಖ್ಯೆ:614/ಬಾಕೋಕಾ.ನಿ.ಇಂ(ವಿ)/ಬೃಕಾವಿ/ಸಕಾನಿಇಂ(ಕ)/22-23/5318-5321 ದಿನಾಂಕ:14-12-2022.

**- **** -**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ 220 ಕೆ.ವಿ. ವಿದ್ಯುತ್ ಸ್ವೀಕರಣ ಕೇಂದ್ರ ಮಹಾಲಿಂಗಪೂರದಿಂದ 110 ಕೆ.ವಿ. ಒಂಟಿ ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತನೆ ಮಾಡುವ ಕೆಲಸಕ್ಕೆ 18.458 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಉಪಯೋಗಿಸುವುದಕ್ಕೆ ಅನುಮೋದನೆ ಸಲುವಾಗಿ ಈಗಾಗಲೇ ಪ್ರಸ್ತಾವನೆಯನ್ನು ಕಾರ್ಯ ನಿರ್ವಾಹಕ ಇಂಜಿನಿಯರರು (ವಿ) ಬೃಹತ್ ಕಾಮಗಾರಿ ವಿಭಾಗ, ಬಾಗಲಕೋಟೆರವರು ಸಲ್ಲಿಸಿದ್ದು, ಉಲ್ಲೇಖ (1)ರ ಪತ್ರದಡಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ), ಹಾಗೂ ನೋಡಲ್ ಅಧಿಕಾರಿಗಳು (ಎಫ್‌ಸಿಎ), ಬೆಂಗಳೂರುವರು 1987 ರಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿ/ಸಿಬ್ಬಂದಿಗಳ ವಿವರಗಳನ್ನು ಸಲ್ಲಿಸಲು ಸೂಚಿಸಿರುತ್ತಾರೆ.

ಉಲ್ಲೇಖ (2)ರ ತಮ್ಮ ಪತ್ರದಡಿ ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಪ್ರಕಾರ ಅನುಮೋದನೆ ಪಡೆಯದೇ ವಿದ್ಯುತ್ ಲೈನ್ ಎಳೆದಿರುವುದಕ್ಕೆ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳ ಮೇಲೆ ಕಾನೂನಾತ್ಮಕ ಕ್ರಮ ಕೈಗೊಂಡ ಬಗ್ಗೆ ವರದಿ ನೀಡಲು ತಿಳಿಸಿರುವ ಮೇರೆಗೆ ವರದಿ ಸಲ್ಲಿಸಲು ತಿಳಿಸಿ ಸದರಿ ಪ್ರಸ್ತಾವನೆಯನ್ನು ಕಾರ್ಯ ನಿರ್ವಾಹಕ ಇಂಜಿನಿಯರರು (ವಿ) ಬೃಹತ್ ಕಾಮಗಾರಿ ವಿಭಾಗ, ಬಾಗಲಕೋಟೆರವರಿಗೆ ಆನ್‌ಲೈನ್ ಮೂಲಕ ಹಿಂತಿರುಗಿಸಲಾಗಿತ್ತು.

ಈ ಕುರಿತು ಉಪಯೋಗಿ ಸಂಸ್ಥೆಯವರು ಉಲ್ಲೇಖ (4)ರ ಪತ್ರದಡಿ ಸದರಿ ಮಾರ್ಗವು ಒಂಟಿ ಗೋಪುರದ ಒಂಟಿ ಮಾರ್ಗವು ಇದ್ದು, 1987 ರಲ್ಲಿ ಚಾಲನೆಗೊಂಡಿರುತ್ತದೆ. ಸದರಿ ಮಾರ್ಗವು ನಿರ್ವಹಣೆ ಮಾಡುವಾಗ ಆಗಿನ ವಿದ್ಯುತ್ ನಿಗಮದ ಅಧಿಕಾರಿಗಳು ಯಾವುದೇ ದುರುದ್ದೇಶವಿಲ್ಲದೇ, ಬಹುಶಃ ಅರಣ್ಯ ಪ್ರದೇಶದ ಗಡಿ ಗುರುತಿಸುವಿಕೆ ಮಾಹಿತಿ ಇರದ ಮೇರೆಗೆ 110 ಕೆ.ವಿ. ಮಾರ್ಗವನ್ನು ನಿರ್ಮಿಸಿರುತ್ತಾರೆ. ಮಹಾಲಿಂಗಪೂರ-ಜಮಖಂಡಿ ಮಾರ್ಗದಲ್ಲಿನ ಪ್ರದೇಶವು ಅತೀ ಹೆಚ್ಚು ಕಬ್ಬು ಬೆಳೆಯುವ ಪ್ರದೇಶವಾಗಿರುತ್ತದೆ. ಸದರಿ ಮಾರ್ಗದಿಂದ ಮಹಾಲಿಂಗಪೂರ-ಜಮಖಂಡಿ ಸುತ್ತಮುತ್ತಲಿನ ರೈತರು ಬಹಳ ವಿದ್ಯುತ್ ಕೊರತೆಯನ್ನು ಅನುಭವಿಸುತ್ತಿದ್ದರು.

ಒಂಟಿ ಗೋಪುರದ ವಾಹಕವು ಬಹಳ ಹಳೆಯದಾಗಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಬಹಳ ಇರುತ್ತದೆ. ಆದ್ದರಿಂದ ಈ ಎಲ್ಲ ನ್ಯೂನತೆಗಳನ್ನು ಸರಿಪಡಿಸುವ ಸಲುವಾಗಿ 110 ಕೆ.ವಿ. ಜೋಡಿ ಗೋಪುರಗಳ ಮೇಲೆ ಜೋಡಿ ಮಾರ್ಗದ ವಾಹಕ ಅಳವಡಿಸುವ ಯೋಜನೆಯಿರುತ್ತದೆ. ಜೋಡಿ

ಗೋಪುರಗಳನ್ನು ಅಳವಡಿಸುವುದರಿಂದ ವಿದ್ಯುತ್ ವಾಹಕದ ನೆಲದ ತೆರವು (ಗ್ರೌಂಡ್ ಕ್ಲಿಯರನ್ಸ್) ಹೆಚ್ಚಿಗೆ ಆಗುವುದು.

ಸದರಿ ಕಾಮಗಾರಿ 110 ಕೆ.ವಿ. ಮಾರ್ಗವು ಅರಣ್ಯ ಪ್ರದೇಶದ (8.392 ಕಿ.ಮೀ) ಹೊರತಾಗಿ, 14.065/23.897 ಕಿ.ಮೀ. ಮಾರ್ಗದ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಸದರಿ ಕಾಮಗಾರಿಯಿಂದ 110/11 ಕೆ.ವಿ ವಿದ್ಯುತ್ ಉಪಕೇಂದ್ರ ಜಮಖಂಡಿ, 110/11 ಕೆ.ವಿ ವಿದ್ಯುತ್ ಉಪಕೇಂದ್ರ ನಾವಲಗಿ ಮತ್ತು 110/11 ಕೆ.ವಿ ವಿದ್ಯುತ್ ಉಪ ಕೇಂದ್ರ ಬನಹಟ್ಟಿ ಗಳಿಗೆ ಪರ್ಯಾಯ ವಿದ್ಯುತ್ ಸರಬರಾಜು ಮಾಡಲು ಅನುಕೂಲವಾಗುವುದು. ಈ ಯೋಜನೆಯಿಂದ ಜಮಖಂಡಿ ನಗರ, ಮದರಖಂಡಿ, ಕಲ್ಲಹಳ್ಳಿ, ಹಿಪ್ಪರಗಿ, ಕುಲಹಳ್ಳಿ, ಸಿದ್ದಾಪೂರ, ಕುಂಬಾರಹಳ್ಳ, ಸನಾಳ, ಆಲಗೂರ, ಕುಂಚನೂರ, ಜಕನೂರ, ಹುನ್ನೂರು, ಕಡಪಟ್ಟಿ, ನಾವಲಗಿ, ಜಗದಾಳ, ಬಂಡಿಗಣಿ, ಯಲ್ಲಟ್ಟಿ, ಅಸ್ಕಿ-ಆಸಂಗಿ, ಬಹಟ್ಟಿ ಕೆರಿ, ಬಿಸುಗುಪ್ಪ ಮತ್ತು ಸುತ್ತಮುತ್ತಲಿನ ಗ್ರಾಮಗಳ ಗ್ರಾಹಕರುಗಳಿಗೆ ಗುಣಮಟ್ಟದ ವಿದ್ಯುತ್ ಪೂರೈಸಲು ಅನುಕೂಲವಾಗುವುದು. ಸದರಿ ಯೋಜನೆಯು ಫೆಬ್ರುವರಿ-2017 ರಲ್ಲಿ ಚಾಲನೆಗೊಂಡಿದ್ದು, ಮೇ-2018 ರಲ್ಲಿ 14.605 ಕಿ.ಮೀ ಮಾರ್ಗದ ಕಾಮಗಾರಿಯನ್ನು ಪೂರ್ಣಗೊಳಿಸಿ, ಚಾಲನೆಗೊಳಿಸಲಾಗಿದೆ. ಉಳಿದ 9.292 ಕಿ.ಮೀ. ಮಾರ್ಗವು ಅರಣ್ಯ ಇಲಾಖೆಯ ಅನುಮೋದನೆಯ ಸಲುವಾಗಿ ಸ್ಥಗಿತಗೊಂಡಿರುತ್ತದೆ. ಮುಂದುವರೆದು, ಬಾಗಲಕೋಟೆ ವಿದ್ಯುತ್ ವಿಭಾಗ ಕಚೇರಿಯು 2000 ನೇ ಇಸವಿಯಲ್ಲಿ ಚಾಲನೆಗೊಂಡಿದ್ದು, ಈ ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳ ವಿವರಗಳು ಲಭ್ಯವಿರುವುದಿಲ್ಲ. ಆದ್ದರಿಂದ ಸದರಿ ಯೋಜನೆಗೆ ಅನುಮೋದನೆ ಕೊಡಬೇಕೆಂದು ವಿನಂತಿಸಿ ಆನ್‌ಲೈನ್ ಮೂಲಕ ಪ್ರಸ್ತಾವನೆಯನ್ನು ಉಲ್ಲೇಖ (7)ರ ಪತ್ರದಡಿ ಸಲ್ಲಿಸಿದ ವರದಿಯನ್ನು ಉಲ್ಲೇಖ (8)ರ ಈ ಕಚೇರಿ ಪತ್ರದಡಿ ಈಗಾಗಲೇ ಸಲ್ಲಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ (9)ರ ಪತ್ರದಡಿ ಕೇಂದ್ರ ಸರ್ಕಾರದ ಪತ್ರದಡಿ ಸೂಚಿಸಿರುವಂತೆ, ಮಾಹಿತಿಯನ್ನು ಸಲ್ಲಿಸಲು ಉಲ್ಲೇಖ (10) ರಡಿ ತಿಳಿಸಿದಂತೆ, ವರದಿಯನ್ನು ಸಲ್ಲಿಸಲು ಉಲ್ಲೇಖ (11) ರ ಈ ಕಚೇರಿ ಪತ್ರದಡಿ ಉಪಯೋಗಿ ಸಂಸ್ಥೆಯವರಿಗೆ ಸೂಚಿಸಲಾಗಿತ್ತು. ಅದರಂತೆ ಉಲ್ಲೇಖ (12)ರ ಪತ್ರದಡಿ ಸದರಿಯವರು ವರದಿಯನ್ನು ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ವರದಿಯಲ್ಲಿ ಅರಣ್ಯದ ಗಡಿಯನ್ನು ಗುರುತಿಸಿರದ ಕಾರಣ ಅರಣ್ಯ ಭೂಮಿಯಲ್ಲಿ ಸದರಿ ಪ್ರಸರಣ ಮಾರ್ಗವನ್ನು ತಿಳಿಯದೇ ನಿರ್ಮಾಣ ಮಾಡಲಾಗಿದೆ. ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ವಿದ್ಯುತ್ ಉಪಕೇಂದ್ರ ಮತ್ತು ಪ್ರಸರಣ ಮಾರ್ಗಗಳನ್ನು ಅರಣ್ಯ ಸಂರಕ್ಷಣಾ ಕಾಯ್ದೆಯ ಅರಿವಿಲ್ಲದೇ, ಬನಹಟ್ಟಿ ಮತ್ತು ಜಮಖಂಡಿಯ ಗ್ರಾಹಕರಿಗೆ ವಿದ್ಯುತ್ ಒದಗಿಸುವ ಉದ್ದೇಶದಿಂದ ನಿರ್ಮಿಸಿದ್ದು, ಉದ್ದೇಶಪೂರ್ವಕವಾಗಿ ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಉಲಂಘನೆ ಮಾಡಿರುವುದಿಲ್ಲ ಆದ್ದರಿಂದ ಕಾಮಗಾರಿಯನ್ನು ನಿರ್ಮಿಸಿದ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಹಾಗೂ 2000 ನೇ ಇಸ್ವಿಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಹೆಚ್ಚಿನ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಬಾಗಲಕೋಟೆಯಲ್ಲಿ ಬೃಹತ್ ಕಾಮಗಾರಿ ವಿಭಾಗವನ್ನು ಸ್ಥಾಪಿಸಲಾಗಿದ್ದು, ಆ ಸಂದರ್ಭದಲ್ಲಿ, ಹಲವು ಸಂದರ್ಭಗಳಲ್ಲಿ ಹಳೆಯ ಕಚೇರಿ ಕಟ್ಟಡದಿಂದ, ಹೊಸ ಕಟ್ಟಡಕ್ಕೆ ಕಚೇರಿಯನ್ನು ಸ್ಥಳಾಂತರಿಸಲಾಯಿತು. ಈ ಸಮಯದಲ್ಲಿ ಕೆಲವು ದಾಖಲೆಗಳು ಸಹ ತಪ್ಪಿಹೋಗಿರುವುದರಿಂದ ಪ್ರಸ್ತುತ ಲಭ್ಯವಿರುವುದಿಲ್ಲವೆಂದು ಮತ್ತು ನಿಯಮಗಳ ಪ್ರಕಾರ ಅರಣ್ಯ ಇಲಾಖೆಗೆ ಸದರಿ ವಿಷಯವಾಗಿ ಶುಲ್ಕವನ್ನು ಪಾವತಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಸಿದ್ಧವಿರುತ್ತದೆ. ಎಂದು ವರದಿ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ವರದಿಯನ್ನು ಮಾನ್ಯ ಮಾಡಲು ತಮ್ಮಲ್ಲಿ ವಿನಂತಿಸುತ್ತಾ, ಸದರಿ ವರದಿಯನ್ನು ಈ ಪತ್ರದೊಂದಿಗೆ

ಲಗತ್ತಿಸಿ ತಮ್ಮ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ. ಮುಂದುವರೆದು, ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕ ತಮಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ ಎಂಬ ವಿಷಯವನ್ನು ತಮ್ಮ ಆದ್ಯ ಗಮನಕ್ಕೆ ತರಲಾಗಿದೆ.

ತಮ್ಮ ವಿಶ್ವಾಸಿ

Digitally Signed by
Prashant Shankhinamath Ifs
Date: 09-01-2023 20:37:58
Reason: Approved
ಉಪ ಅರಣ್ಯ ಸಂರಕ್ಷಣಾಧಿಕಾರಿ
ಬಾಗಲಕೋಟೆ ವಿಭಾಗ, ಬಾಗಲಕೋಟೆ

14316/2022/O/O DCF BAGALKOT

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ನಿಗಮದ ಗುರುತಿನ ಸಂಖ್ಯೆ: (ಸಿ.ಐ.ಎನ್): ಯು40109ಕೆಎ1999ಎಸ್.ಜಿ.ಸಿ025521)

**ಕಂಪನಿಯ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.**

ದೂ: 08354 – 200899,
ಮೊ: 9448365289; Fax : 08354 – 200899
ಮಿಂಚಂಚೆ: eeemwdbagalkot@gmail.com,
eemwdbagalkot@rediffmail.com

**ಕಾರ್ಯನಿರ್ವಾಹಕ ಇಂಜಿನೀಯರರು (ವಿ),**
ಬೃಹತ್ ಕಾಮಗಾರಿ ವಿಭಾಗ ಕಛೇರಿ,
1ನೇ ಮಹಡಿ, ಪ್ರಸರಣ ವಲಯ ಕಛೇರಿಗಳ
ಸಂಕೀರ್ಣ, 110 ಕೆ.ವ್ಹಿ. ನವನಗರ ಗ್ರಿಡ್,
ನವನಗರ, ಬಾಗಲಕೋಟೆ– 587103.

ಸಂಖ್ಯೆ: 614/ಬಾಕೋ/ಕಾನಿಇಂ(ವಿ)/ಬೃಕಾವಿ/ಸಕಾನಿಇಂ(ಕ)/22-23/ 5318-5321
ಲಗತ್ತು:

ದಿನಾಂಕ : 14/12/22

ಗೆ,

**ಅರಣ್ಯ ಉಪ-ಸಂರಕ್ಷಣಾಧಿಕಾರಿಗಳು,**
ಜಿಲ್ಲಾ ಕಮೀಷನರ್ ಕಛೇರಿ,
ಬಾಗಲಕೋಟ ವಿಭಾಗ, 2ನೇ ಮಹಡಿ,
**ಬಾಗಲಕೋಟ.**

**ಮಾನ್ಯರೆ,**

**ವಿಷಯ :** ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ **220ಕೆವಿ ವಿದ್ಯುತ್ ಸ್ವೀಕರಣಾ ಕೇಂದ್ರ ಮಹಾಲಿಂಗಪೂರದಿಂದ 110ಕೆವಿ ವಿದ್ಯುತ್ ಉಪ-ಕೇಂದ್ರ ಜಮಖಂಡಿಯ ವರೆಗೆ** 110ಕೆವಿಯ ಒಂಟಿ ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತನೆ ಮಾಡುವ ಕೆಲಸಕ್ಕೆ **18.458 ಹೆ.** ಅರಣ್ಯ ಪ್ರದೇಶವನ್ನು **(ಪ್ರಪೋಸಲ್ ಸಂಖ್ಯೆ: ಎಫ್‌ಪಿ/ಕೆಎ/ಟಿಆರ್‌ಎಎನ್‌ಎಸ್/16981/2015)** ಉಪಯೋಗಿಸುವುದಕ್ಕೆ ಅನುಮೋದನೆಯನ್ನು ನೀಡುವ ಕುರಿತು.

**ಉಲ್ಲೇಖ :** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರುರವರ ಪತ್ರ ಸಂಖ್ಯೆ: ಕೆಪಿಟಿಸಿಎಲ್/ಎಮ್‌ಡಿ/ಎಸ್‌ಪಿಎಸ್/2022-23/148, ದಿನಾಂಕ: 29.09.2022.

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಪ್ರಾದೇಶಿಕ ಅರಣ್ಯ ವಿಭಾಗ, ಬಾಗಲಕೋಟ
14 DEC 2022
ಆವಕ ಸಂಖ್ಯೆ............, ಶಾಖೆ ............
ಪ್ರವ್ಯ ಸಹಿ ಉ.ಅ.ಸಂ. ಸಹಿ

~01412220~

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಸಂಸ್ಥೆಯು ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುತ್ತದೆ. ಇದರಲ್ಲಿ, ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜನ್ನು ಗ್ರಾಹಕರುಗಳಿಗೆ ತಲುಪಿಸುವ ಸಲುವಾಗಿ, ವಿದ್ಯುತ್ ಉಪ-ಕೇಂದ್ರಗಳನ್ನು ಮತ್ತು ಪ್ರಸರಣ ಮಾರ್ಗಗಳನ್ನು ಕರ್ನಾಟಕ ರಾಜ್ಯದಲ್ಲಿ ನಿರ್ಮಿಸಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯ, ಜಮಖಂಡಿ ತಾಲೂಕಿನ ಜಮಖಂಡಿ ನಗರ ಪ್ರದೇಶ, ಬನಹಟ್ಟಿ ನಗರ ಮತ್ತು ಗ್ರಾಮೀಣ ಪ್ರದೇಶ, ಮದರಖಂಡಿ, ಕಲ್ಲಹಳ್ಳಿ, ಹಿಪ್ಪರಗಿ, ಕುಲಹಳ್ಳಿ, ಸಿದ್ದಾಪೂರ, ಕುಂಬಾರಹಳ್ಳಿ, ಸನಾಳ, ಆಲಗೂರ, ಕುಂಚನೂರು, ಜಕನೂರು, ಹನ್ನೂರು, ಕಡಪಟ್ಟಿ, ನಾವಲಗಿ, ಜಗದಾಳ, ಬಂಡಿಗಣಿ, ಯಲ್ಲಟ್ಟಿ, ಅಸ್ಕಿ-ಆಸಂಗಿ, ಬಿಸುಗುಪ್ಪಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ವಿದ್ಯುತ್ ಸರಬರಾಜು ಸಲುವಾಗಿ, 110 ಕೆ.ವ್ಹಿ. ಒಂದು ಮಾರ್ಗವನ್ನು ವರ್ಷ 1987 ರಲ್ಲಿ ಚಾಲನೆಗೊಳಿಸಲಾಗಿತ್ತು.

ಸಧ್ಯದ ಪರಿಸ್ಥಿತಿಯಲ್ಲಿ, ದಿನದಿಂದ ದಿನಕ್ಕೆ ವಿದ್ಯುತ್ ಹೊರೆ ಹೆಚ್ಚಾಗುತ್ತಿದ್ದು, ಅದನ್ನು ಸರಿಪಡಿಸಲು ಒಂದು ಸರ್ಕ್ಯೂಟ್‌ನ 110 ಕೆ.ವ್ಹಿ. ಮಾರ್ಗವನ್ನು ಜೋಡಿ ಮಾರ್ಗದ ಪ್ರಸ್ತಾವಣೆಯು ಅನುಮೋದನೆಗೊಂಡು ಹಾಗೂ ಪೆಬ್ರುವರಿ-2017 ರಲ್ಲಿ 110 ಕೆ.ವ್ಹಿ. ಮಾರ್ಗವನ್ನು ಜೋಡಿ ಮಾರ್ಗದ ಕಾಮಗಾರಿಯನ್ನು ಕೈಗೊಳ್ಳಲು ಗುತ್ತಿಗೆ ನೀಡಲಾಗಿದೆ. ಸದರಿ ಒಟ್ಟು 23.897 ಕಿ.ಮೀ. ಮಾರ್ಗದಲ್ಲಿ ಅರಣ್ಯ ಪ್ರದೇಶದ 8.392 ಕಿ.ಮೀ. ಮಾರ್ಗವನ್ನು ಬಿಟ್ಟು, ಎಲ್ಲ ಕಾಮಗಾರಿ ಪೂರ್ಣಗೊಂಡಿದೆ.

ಪ್ರಸ್ತುತ 220 ಕೆ.ವ್ಹಿ. ಮಹಾಲಿಂಗಪೂರ ಮಾರ್ಗದಿಂದ 11 ಕೆ.ವ್ಹಿ. ಜಮಖಂಡಿ ವಿದ್ಯುತ್ ಉಪ-ಕೇಂದ್ರಕ್ಕೆ 1987 ರಲ್ಲಿ 8.932 ಕಿ.ಮೀ. ಪ್ರಸರಣ ಮಾರ್ಗವನ್ನು ಕವಿಪ್ರನಿನಿ ಅಧಿಕಾರಿಗಳು ಅರಣ್ಯ ಪ್ರದೇಶದಲ್ಲಿ ಗಡಿ ಭಾಗವನ್ನು ಗುರುತಿಸಿರದ ಕಾರಣ, ಗೊತ್ತಿಲ್ಲದೆಯೇ ಮಾರ್ಗವನ್ನು ನಿರ್ಮಾಣ ಮಾಡಿರುತ್ತಾರೆ.

2015 ರಲ್ಲಿ ಕವಿಪ್ರನಿನಿಯಿಂದ ಒಂಟಿ ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತಿಸಲು ಪ್ರಸ್ತಾವಣೆಯನ್ನು ಸಲ್ಲಿಸಿದಾಗ, 1987 ರಲ್ಲಿ ನಿರ್ಮಿಸಿದ ಮಾರ್ಗಕ್ಕೆ ಕವಿಪ್ರನಿನಿ ಅಧಿಕಾರಿಗಳು ಅರಣ್ಯ ಇಲಾಖೆಯಿಂದ ಅನುಮೋದನೆಯನ್ನು ಪಡೆದಿರುವುದಿಲ್ಲವೆಂದು ಕಂಡುಬಂದಿದೆ. ಆದ್ದರಿಂದ, ಸದರಿ ಪ್ರಸ್ತಾವಣೆಯನ್ನು ಅನುಮೋದನೆ ಪಡೆಯಲು ಅರಣ್ಯ ಇಲಾಖೆಗೆ ಸಲ್ಲಿಸಲಾಗಿದೆ.

ಪ್ರಸ್ತುತ ಅರಣ್ಯ ಅಧಿಕಾರಿಗಳು ಅರಣ್ಯ ಪ್ರದೇಶದಲ್ಲಿ ಪ್ರಸರಣ ಮಾರ್ಗವನ್ನು ನಿರ್ಮಿಸಿದ ಅಧಿಕಾರಿಗಳ ಹೆಸರು ಮತ್ತು ಕ್ರಮ ಕೈಗೊಂಡ ವಿವರಗಳನ್ನು ಒದಗಿಸುವಂತೆ ಕವಿಪ್ರನಿನಿ ಅಧಿಕಾರಿಗಳನ್ನು ಕೋರಿರುತ್ತಾರೆ. ಆದರೆ ಬನಹಟ್ಟಿ ಮತ್ತು ಜಮಖಂಡಿಯ ಗ್ರಾಹಕರಿಗೆ ವಿದ್ಯುತ್ ಒದಗಿಸುವ ಉದ್ದೇಶದಿಂದ ಅರಣ್ಯ ಪ್ರದೇಶದಲ್ಲಿ ಅರಿವಿಲ್ಲದೆ ಪ್ರಸರಣ ಮಾರ್ಗವನ್ನು ನಿರ್ಮಿಸಿರುತ್ತಾರೆ. ಉದ್ದೇಶ ಪೂರ್ವಕವಾಗಿ ಅರಣ್ಯ ಸಂರಕ್ಷಣಾ ಕಾಯ್ದೆಯ ಉಲ್ಲಂಘನೆ ಮಾಡಿರುವುದಿಲ್ಲ. ಆದ್ದರಿಂದ, ಕಾಮಗಾರಿಯನ್ನು ನಿರ್ಮಿಸಿದ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

1987 ರಲ್ಲಿ, ಬಾಗಲಕೋಟೆ, ಬೆಳಗಾವಿ ಮತ್ತು ವಿಜಯಪುರ ಜಿಲ್ಲೆಗಳ ಎಲ್ಲಾ ಕಾಮಗಾರಿಗಳನ್ನು ನಿರ್ವಹಿಸಲು ಬೆಳಗಾವಿಯಲ್ಲಿ ಒಂದೇ ಬೃಹತ್ ಕಾಮಗಾರಿ ವಿಭಾಗ ಇತ್ತು. 2000 ವರ್ಷದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಹೆಚ್ಚಿನ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ, ಬಾಗಲಕೋಟೆಯಲ್ಲಿ ಬೃಹತ್ ಕಾಮಗಾರಿ ವಿಭಾಗವನ್ನು ಸ್ಥಾಪಿಸಲಾಯಿತು. ಆ ಸಂದರ್ಭದಲ್ಲಿ ಹಲವು ಸಂದರ್ಭಗಳಲ್ಲಿ ಹಳೆಯ ಕಛೇರಿ ಕಟ್ಟಡದಿಂದ, ಹೊಸ ಕಟ್ಟಡಕ್ಕೆ ಕಛೇರಿಯನ್ನು ಸ್ಥಳಾಂತರಿಸಲಾಯಿತು. ಈ ಸಮಯದಲ್ಲಿ ಕೆಲವು ದಾಖಲೆಗಳು ಸಹ ತಪ್ಪಿಹೋಗಿರುವುದರಿಂದ ಪ್ರಸ್ತುತ ಲಭ್ಯವಿರುವುದಿಲ್ಲ.

ಮೇಲೆ ವಿವರಿಸಿದ ಸಂದರ್ಭಗಳಲ್ಲಿ ಅರಣ್ಯದ ಗಡಿಯನ್ನು ಗುರುತಿಸಿರದ ಕಾರಣ ಅರಣ್ಯ ಭೂಮಿಯಲ್ಲಿ ಸದರಿ ಪ್ರಸರಣ ಮಾರ್ಗವನ್ನು ತಿಳಿಯದೆ ನಿರ್ಮಿಸಲಾಗಿದೆ. ಮತ್ತು ಮೇಲೆ ವಿವರಿಸಿದಂತೆ ಸಾರ್ವಜನಿಕ ಸೇವೆಯ ಹಿತದೃಷ್ಟಿಯಿಂದ ವಿದ್ಯುತ್ ಉಪ-ಕೇಂದ್ರ ಮತ್ತು ಪ್ರಸರಣ ಮಾರ್ಗವನ್ನು ನಿರ್ಮಿಸಲಾಗಿದೆ ಎಂಬುದು ಸ್ಪಷ್ಟಪಡಿಸಲಾಗಿದೆ. ಆದಾಗ್ಯೂ, ನಿಯಮಗಳ ಪ್ರಕಾರ ಅರಣ್ಯ ಇಲಾಖೆಗೆ ಸದರಿ ವಿಷಯವಾಗಿ ಶುಲ್ಕವನ್ನು ಪಾವತಿಸಲು ಕವಿಪ್ರನಿನಿ ಸಿದ್ಧವಿರುತ್ತದೆ.

ಆದ್ದರಿಂದ, ಕವಿಪ್ರನಿನಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡ ವಿವರಗಳನ್ನು ಒತ್ತಾಯಿಸದೆ, ಸದರಿ ಕಾಮಗಾರಿಗೆ ಹಂತ-1 (ಸ್ಟೇಜ್-1) ಗೆ ಅನುಮೋದನೆಯನ್ನು ನೀಡಲು ಕೋರಲಾಗಿದೆ.

ಇದು ತಮ್ಮ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

14/12

**ಕಾರ್ಯನಿರ್ವಾಹಕ ಇಂಜನೀಯರ್ (ವಿ),**
ಬೃಹತ್ ಕಾಮಗಾರಿ ವಿಭಾಗ, ಕ.ವಿ.ಪ್ರ.ನಿ.ನಿ,
**ಬಾಗಲಕೋಟೆ.**